ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE ● AFFILIATED TO BANGALORE UNIVERSITY ● AICTE APPROVED ● 2(F) & 12 (B) RECOGNITION OF UGC ● ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – NOV/DEC 2025

## KANNADA – I SEMESTER BCA (F+R)

## 24BCA11K: ಗಣಕ ಕನ್ನಡ 1

**Time: 3 Hours** **Max. Marks: 80**

**I. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (160 ಪದಗಳಿಗೆ ಮೀರದಂತೆ)** 3x10=30

1. ಮುಸ್ತಫ ಮತ್ತು ಹುಡುಗಿಯ ಪ್ರೇಮ ಪ್ರಸಂಗವು "ಒಂದು ಚಿತ್ರ" ಕತೆಯಲ್ಲಿ ಹೇಗೆ ಮೂಡಿಬಂದಿದೆ? ವಿಶ್ಲೇಷಿಸಿ.
2. ಕಾಲೇಜಿನ ಬ್ಯೂಟಿ ಕ್ವೀನ್ ಮುಬೀನಾ, ಸೇಲ್ಸ್‌ಗರ್ಲ್ ಬೇಬಿಯಕ್ಕ ಆದದ್ದು ಹೇಗೆ? ವಿವರಿಸಿ.
3. "ಅನುಭವಾಮೃತ" ಕವಿತೆಯಲ್ಲಿ ಕವಿ ಬ್ರಹ್ಮಜ್ಞಾನವನ್ನು ಕುರಿತು ಹೇಗೆ ವಿವರಿಸಿದ್ದಾರೆ?
4. ಫೇಸ್ಬುಕ್, ಟ್ವಿಟರ್, ಬ್ಲಾಗ್‌ಗಳ ಬಗ್ಗೆ ಟಿಪ್ಪಣಿ ಬರೆಯಿರಿ.

**II. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (80 ಪದಗಳಿಗೆ ಮೀರದಂತೆ)** 5x5=25

1. ಕನ್ನಡಾಭಿಮಾನವನ್ನು ಕುರಿತು ಬೇಂದ್ರೆ ಅವರ ಅಭಿಪ್ರಾಯವೇನು?
2. ಶಂಕರನ ಪತ್ರಕ್ಕಾಗಿ ಶಾಂತಿಯು ಕಾಯಲು ಕಾರಣವೇನು? ಚರ್ಚಿಸಿ.
3. ಅಲಕೆಗೆ ಹೊರಟ ಮೋಡಗಳ ಸೊಬಗೇನು?
4. ಐಟಿ ಉದ್ದಿಮೆ ಜನರನ್ನು ಹೇಗೆ ಸೆಳೆಯುತ್ತಿದೆ? ಚರ್ಚಿಸಿ.
5. ಪಂಪ, ಕುಮಾರವ್ಯಾಸ ಇವರಲ್ಲಿ ಯಾರಾದರೂ ಒಬ್ಬರನ್ನು ಪರಿಚಯಿಸಿ.
6. ಸಂಸ್ಕೃತ ಪದಗಳು ತತ್ಸಮ-ತದ್ಭವಗಳಾಗುವ ಬಗೆಯನ್ನು ವಿವರಿಸಿ.

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿರಿ.** 1x5=5

ಕುದುರೆಮುಖದ ಗಣಿಗಾರಿಕೆಯಿಂದ ಚಿನ್ನ ಸಿಗುವುದಾದರೂ ನಮಗದು ಬೇಕಿಲ್ಲ ಎಂದು ನಾವು ತಿಳಿದುಕೊಂಡು ವರ್ತಿಸಬೇಕು. ನಿತ್ಯ ದುಡಿಯುವ ಒಬ್ಬ ಮನುಷ್ಯ ಮತ್ತೆ ನಾಳೆ ದುಡಿಯಲು ಬೇಕಾಗುವ ಆಹಾರವನ್ನು ಸಂಪಾದಿಸುತ್ತಾನೆ. ಹೀಗೆ ಶಕ್ತಿ ಪಡೆದು ದುಡಿಮೆಗೆ ಉಪಯೋಗಿಸುತ್ತಾ ಇರುವ ನಮ್ಮ ಅಸಂಖ್ಯಾ ದುಡಿಮೆಗಾರರು ಪರಾಗಸ್ಪರ್ಷಕ್ಕೆ ಕಾದಿರುವ ಹೂವಿನಂತಿರುತ್ತಾರೆ. ಯಾವುದೋ ದುಂಬಿ ಆಕಸ್ಮಿಕವಾಗಿ ಬಂದು ತನ್ನನ್ನು ಮುಟ್ಟಿತೆನ್ನುವ ಭರವಸೆಯಲ್ಲಿ ಗಾಳಿಯಲ್ಲಿ ಇರುವ ಹೂವಿನ ಹಾಗೆ ಇದ್ದುಬಿಡುತ್ತಾರೆ. ಯಾವುದೇ ದೈವ ತಮ್ಮನ್ನು ಬಂದು ಮುಟ್ಟಿತೆನ್ನುವ ಭರವಸೆಯಲ್ಲಿ, ಹರಕೆಯಲ್ಲಿ ಬಾಳುತ್ತಾ ನದಿಗಳ ಸಂಗಮದಲ್ಲಿ ಸಹಸ್ರ ಸಂಖ್ಯೆಯಲ್ಲಿ ಮಿಯುತ್ತಾ, ಕಾಲ್ನಡಿಗೆಯಲ್ಲಿ ಇರುವ ಅಪಾರ ಜನ ಕೋಟಿ ನಮ್ಮ ದಿನನಿತ್ಯದ ಬದುಕನ್ನು ಅರ್ಥಪೂರ್ಣವನ್ನಾಗಿ ಮಾಡಬಲ್ಲರು. ದೇವರು ಇದ್ದಾನೋ ಇಲ್ಲವೋ ತಿಳಿಯದು. ಪ್ರಾಯಶ ಅವನನ್ನು ಮುಟ್ಟುವ ಭರವಸೆಯಲ್ಲಿ ಎಲ್ಲರೂ ಕೊನೆಗೆ ಸಾಯುವುದೇನೋ? ಹೀಗೆ ನಿತ್ಯದ ದುಡಿಮೆಯ ಕಾಯಕ ಮತ್ತು ಅಗೋಚರವಾದುದ್ದರ ಭರವಸೆಯ ಈ ಜೀವನದಲ್ಲಿ ಭಾರತದ ಅಪಾರ ಜನಸಂಖ್ಯೆಗೆ ನಿಜವಾಗಿ

ಸಿಗುವುದು ಮಕ್ಕಳ ಲಾಲನೆ, ಪಾಲನೆ, ಹಬ್ಬ ಹರಿದಿನಗಳ ಊಟ, ಕೊಂಚ ಬಿಡುವಿದ್ದಾಗ ನಡೆಯುವ ಕಾಡು ಹರಟೆ ಇವುಗಳಲ್ಲೇ.

ಇದನ್ನು ಈ ಸಂದರ್ಭದಲ್ಲಿ ಮಾತಾಡುವುದೇ ಓದುಗರಿಗೆ ವಿಚಿತ್ರ ಎನ್ನಿಸಬಹುದು. ಆದರೆ ಬದುಕಿನ ಈ ಸ್ಥಾಯಿ ಸ್ವರೂಪವನ್ನು ಮತ್ತು ಅದರ ಸಂಚಾರಿ ಕನಸುಗಳನ್ನು, ಹೃದಯದಲ್ಲಿ ಅರಿತು ದುಡಿಯುವವರಿಗೆ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಈಚಿನ ಅನೇಕ ಯೋಜನೆಗಳು ಕ್ರಿಮಿನಲ್ ವಿಚಾರವಾಗಿ ಭಾಸವಾಗುತ್ತದೆ. ವೇಗವಾಗಿ ಹೋಗುವ ಕಾರುಗಳಿಗಾಗಿ ನಾವು ಮಾಡುವ ರಸ್ತೆಗಳನ್ನು ಕಂಡಾಗ ಒಬ್ಬ ಮುದುಕಿ, ಮುದುಕ ಅಥವಾ ಮಗು ರಸ್ತೆಯ ಈ ಬದಿಯಿಂದ ಇನ್ನೊಂದು ಬದಿಗೆ ಹೋಗುವುದೇ ಅಸಾಧ್ಯವಲ್ಲವೇ ಅನ್ನುವ ಸಂಕಟ ಉಂಟಾದರೆ ನಾವು ಮನುಷ್ಯರು. ಬದಲಾಗಿ ಎಷ್ಟು ವೇಗವಾಗಿ ಒಂದು ಕಾರು ಸಂಚರಿಸಬಲ್ಲದು ಎಂದು ಯೋಚಿಸಿದರೆ ನಾವು ರಾಕ್ಷಸರು.

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** **2x1=2**

**V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.** **2x2=4**

1. ಬಂಡವಾಳಗಾರ   2. ಅನುಕಂಪ

2. ಗಾಳಿಮಾತು   4. ಆಕಾಶ

**VI. ವರ್ಗಾವಣೆ ಪತ್ರ ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೊಂದು ಅರ್ಜಿ ಬರೆಯಿರಿ.** **1x5=5**

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** **4x1=4**

1. ಪಾತಕ   2. ಹೊಲಬು   3. ಬಧಿರ

4. ಬಾಂದಳ   5. ಗಡಿಬಿಡಿ   6. ನಾವೆ

**VIII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **5x1=5**

1. "ಸುಲಿದ ಬಾಳೆಹಣ್ಣಿನಂತೆ" ಸುಲಭವಾದ ಭಾಷೆ ಯಾವುದು?

   ಎ. ತೆಲುಗು   ಬಿ. ಕನ್ನಡ   ಸಿ. ಜರ್ಮನ್   ಡಿ. ಸಂಸ್ಕೃತ

2. ಗುಜ್ಜಾನೆ ಮರಿಯ ಗರ್ಲ್ ಫ್ರೆಂಡ್ ಯಾರು?

   ಎ. ಫಾತಿಮಾ   ಬಿ. ಮುಬೀನಾ   ಸಿ. ಮರಿಯ   ಡಿ. ಸುಮತಿ

3. ಶಾಂತಿ ಶಂಕರನನ್ನು ಯಾವ ರಾಜನಿಗೆ ಹೋಲಿಸಿದಳು?

   ಎ. ಅಶೋಕ   ಬಿ. ಕೃಷ್ಣದೇವರಾಯ   ಸಿ. ಕೆಂಪೇಗೌಡ   ಡಿ. ವಿಕ್ರಮಾದಿತ್ಯ

4. "ಮಾಲಾ" ಪದದ ತದ್ಭವ ರೂಪ.

   ಎ. ಜ್ವಾಲೆ   ಬಿ. ಮಾಲೆ   ಸಿ. ಶಾಲೆ   ಡಿ. ಬಲೆ

5. "ಒಂದು ಚಿತ್ರ" ಕತೆಯನ್ನು ಬರೆದವರು.

   ಎ. ಡಾ. ಅಮರೇಶ ನುಗಡೋಣಿ   ಬಿ. ದ. ರಾ. ಬೇಂದ್ರೆ

   ಸಿ. ಚಂಪಾ   ಡಿ. ಡಾ ಅಶೋಕ್ ಕುಮಾರ್ ರಂಜೇರೆ

*******

ST. FRANCIS DE SALES COLLEGE · EXCELLENCE · EFFICIENCY · TRANSFORMATION · ELECTRONICS CITY, BENGALURU